**ಪಾಠ-10** **ಮೇ 29 ರಿಂದ ಜೂನ್ 4**

# ಹೊಸ ಒಡಂಬಡಿಕೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಯೆರೆ 31:31–34, ಮತ್ತಾಯ 5:17–28, ಹೋಶೇ 2:18–20, ಯೆಶಾಯ 56:6,7, ಇಬ್ರಿಯ 8:7,8, ಇಬ್ರಿಯ 10:4, ಮತ್ತಾಯ 27:51.

**ಸ್ಮರಣವಾಕ್ಯ : "ಯೆಹೋವನು ಇಂತೆನ್ನುತ್ತಾನೆ– ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು"** (ಯೆರೆಮೀಯ 31:31).

ನಿಯತಕಾಲಿಕಯೊಂದರಲ್ಲಿದ್ದ ಜಾಹಿರಾತು ಒಬ್ಬ ವ್ಯವಹಾರ ಕಾರ್ಯಕಾರಿಯು ಇತರೆ ಕಾರ್ಯಕಾರಿಗಳೊಂದಿಗೆ ಕಾರ್ಯಾಲಯದಲ್ಲಿ ನಿಂತುಕೊಂಡಿದ್ದ ಒಂದು ಚಿತ್ರವನ್ನು ತೋರುತ್ತಿತ್ತು. ಆತನು ತನ್ನ ಕೈಯಲ್ಲಿ ಸಾಬೂನಿನ ಬಿಲ್ಲೆಯೊಂದನ್ನು ಹಿಡಿದುಕೊಂಡು ನೆರೆದಿದ್ದ ಸ್ತ್ರೀಪುರುಷರಿಗೆ ತೋರಿಸುವ ಚಿತ್ರ. ಆ ಡಬ್ಬದ ಮೇಲೆ ಕೆಂಪು ಅಕ್ಷರದಲ್ಲಿ ದೊಡ್ಡದಾಗಿ 'ಹೊಸದು' ಎಂಬ ಬರಹವನ್ನು ಹೆಮ್ಮೆಯಿಂದ ತನ್ನ ಬೆರಳಿನಿಂದ ತೋರಿಸುತ್ತಿದ್ದನು. ಆ ಡಬ್ಬದಲ್ಲಿರುವ ಸಾಬೂನು ಹೊಸದು ಎಂದು ಹೇಳುವುದು ಆ ಜಾಹಿರಾತಿನ ಉದ್ದೇಶವಾಗಿತ್ತು. ಆದರೆ ಆ ಡಬ್ಬದ ಮೇಲಿರುವ ಬರಹವು ಹೊಸದಾಗಿತ್ತೆ ವಿನಹ ಉಳಿದುದೆಲ್ಲವೂ ಇದ್ದದ್ದೇ ಆಗಿದ್ದವು. ಇದೇ ಅರ್ಥದಲ್ಲಿ ಒಬ್ಬನು ಹೊಸಒಡಂಬಡಿಕೆಯನ್ನು

---

ಈ ಪಾಠವನ್ನು ಜೂನ್ 5ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಕುರಿತು ಹೀಗೆಯೇ ಹೇಳಬಹುದಾಗಿದೆ. ಒಡಂಬಡಿಕೆಯ ತಳಹದಿ, ಅದರ ಮೂಲ ಆಶಯ ಮತ್ತು ಮೂಲನಿಬಂಧನೆಗಳಲ್ಲಿ (ಷರತ್ತುಗಳು) ಹಳೆಯ ಒಡಂಬಡಿಕೆಯಲ್ಲಿದ್ದವುಗಳೇ ಆಗಿವೆ. ಎಂದೆಂದಿಗೂ ದೇವರಕೃಪೆ ಮತ್ತು ಕರುಣೆಯ ಒಡಂಬಡಿಕೆಯಾಗಿದೆ, ಮಾನವದೋಷ ಮತ್ತು ವಿಫಲತೆಗಳನ್ನು ಮೀರಿದ ಪ್ರೀತಿಯ ತಳಹದಿಯ ಮೇಲೆ ಮಾಡಿದ ಒಡಂಬಡಿಕೆಯಾಗಿದೆ.

**ವಾರದ ಪಕ್ಷಿನೋಟ :** ಹಳೆಯ ಮತ್ತು ಹೊಸಒಡಂಬಡಿಕೆಯಲ್ಲಿ ಅಸ್ತಿತ್ವದಲ್ಲಿರುವ ಸಮಾನ ಅಂಶಗಳಾವುವು? ಧರ್ಮಪ್ರಮಾಣವು ಒಡಂಬಡಿಕೆಯಲ್ಲಿ ಯಾವ ಪಾತ್ರವನ್ನು ವಹಿಸುತ್ತದೆ? ಯಾರೊಂದಿಗೆ ಒಡಂಬಡಿಕೆಗಳು ಏರ್ಪಟ್ಟವು? ಇಬ್ರಿಯ ಪುಸ್ತಕದಲ್ಲಿರುವ "ಉತ್ತಮವಾದ ಒಡಂಬಡಿಕೆ" ಎಂಬ ಪದವು ಏನು ಅರ್ಥಕೊಡುತ್ತದೆ? (ಇಬ್ರಿಯ 8:6ನ್ನು ನೋಡಿರಿ). ಒಡಂಬಡಿಕೆಗೂ ಪರಲೋಕದ ದೇವದರ್ಶನ ಗುಡಾರಕ್ಕೂ ಯಾವ ಸಂಬಂಧವಿದೆ?

**ಭಾನುವಾರ** **ಮೇ 30**

## ಇಗೋ, ದಿನಗಳು ಬರುತ್ತಲಿವೆ....

ಯೆರೆಮೀಯ 31:31–34 ವಚನಗಳನ್ನು ಓದಿರಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ:

1. ಒಡಂಬಡಿಕೆಯನ್ನು ಯಾರು ಪ್ರೇರಿಸಿದರು?
2. ಯಾರ ಧರ್ಮೋಪದೇಶದ ಬಗ್ಗೆ ಇಲ್ಲಿ ಮಾತಾಡಲಾಗಿದೆ? ಇದು ಯಾವ ಧರ್ಮಶಾಸ್ತ್ರ?
3. ದೇವರು ತನ್ನ ಜನರೊಂದಿಗೆ ಹೊಂದಬಯಸುವ ಸಂಬಂಧಿಕ ಅಂಶವನ್ನು ಯಾವ ವಚನಗಳು ಒತ್ತುಕೊಟ್ಟಿವೆ?
4. ತನ್ನ ಜನರ ಪರವಾಗಿ ದೇವರು ಮಾಡಿರುವ ಯಾವ ಕಾರ್ಯವು ಒಡಂಬಡಿಕೆ ಸಂಬಂಧಕ್ಕೆ ಅಸ್ತಿವಾರವಾಗಿದೆ?

ಮೇಲಿನ ವಚನಗಳು ಒಂದನ್ನು ಸ್ಪಷ್ಟಪಡಿಸುತ್ತಿವೆ: ಇಸ್ರಾಯೇಲ್ಯರೊಂದಿಗೆ ಸಿನಾಯಿ ಬೆಟ್ಟದಲ್ಲಿ ಮಾಡಿದ ಹಳೆಯ ಒಡಂಬಡಿಕೆಗಿಂತ ಹೊಸ ಒಡಂಬಡಿಕೆಯು

ಬಹಳ ವ್ಯತ್ಯಾಸವಾಗಿಲ್ಲ. ಮೊದಲು ಮಾಡಿದ ಒಡಂಬಡಿಕೆಯು ಅಥವಾ ಬಳಿಕೆ ತಪ್ಪಿಹೋಯಿತು ಎಂಬುದು ಸಮಸ್ಯೆಯಲ್ಲ. ಅದರ ಸಮಸ್ಯೆಯೆಂದರೆ ಅದು ಮೀರಲ್ಪಟ್ಟಿತು (ಉಲ್ಲಂಘನೆಗೆ ಒಳಗಾಯ್ತು) ಯೆರೆ 31:32ನ್ನು ನೋಡಿರಿ.

ನಾಲ್ಕು ವಚನಗಳ ಮೇಲಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಒದಗಿಸುತ್ತವೆ ಮತ್ತು ಹಳೆಯ ಒಡಂಬಡಿಕೆಯ ಅನೇಕ ಅಂಶಗಳು ಹೊಸದರಲ್ಲೂ ಉಳಿದುಕೊಂಡಿವೆ ಎಂಬುದನ್ನು ಸಾಬೀತುಪಡಿಸುತ್ತವೆ. ಒಂದು ಅರ್ಥದಲ್ಲಿ ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯ ನವೀಕರಣೆಯಾಗಿದೆ. ಇದು ಮೊದಲ ಒಡಂಬಡಿಕೆಯ ನೆರವೇರಿಕೆ ಅಥವಾ ಪರಿಪೂರ್ಣತೆಯಾಗಿದೆ.

ಯೆರೇಮಿಯ 31:34ನೇ ವಚನದ ಕಡೆಯ ಭಾಗದ ಮೇಲೆ ನಮ್ಮ ಗಮನ ಹರಿಸೋಣ. ಇಲ್ಲಿ ದೇವರು ನಾನು ಅವರ ಅಪರಾಧಗಳನ್ನು ಕ್ಷಮಿಸಿ ಅವರ ಪಾಪಗಳನ್ನು ಎಂದಿಗೂ ನೆನಪಿಗೆ ತರುವುದಿಲ್ಲವೆಂದು ಹೇಳುತ್ತಾನೆ. ನನ್ನ ಧರ್ಮೋಪದೇಶವನ್ನು ನಿಮ್ಮ ಅಂತರಂಗದಲ್ಲಿ ಇಡುತ್ತೇನೆ, ನಿಮ್ಮ ಹೃದಯದೊಳಗೆ ಅದನ್ನು ಬರೆಯುತ್ತೇನೆಂದು ಹೇಳಿದಾಗ್ಯೂ ನಿಮ್ಮ ಪಾಪ ಅಪರಾಧಗಳನ್ನು ಕ್ಷಮಿಸುತ್ತೇನೆಂಬುದಕ್ಕೆ ಒತ್ತುಕೊಟ್ಟಿದ್ದಾನೆ. ಇವುಗಳ ನಡುವೆ ವಿರೋಧತೆ ಅಥವಾ ಒತ್ತಡವಿಡುವ ಆಲೋಚನೆಗಳೇನಾದರೂ ಇವೆಯೇ? ಇಲ್ಲವೆಂದರೆ, ಯಾಕಿಲ್ಲ? ಅವರು ಧರ್ಮಶಾಸ್ತ್ರದ ಮುಖ್ಯತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂದು ತೋರ್ಪಡಿಸುತ್ತಾರೆ (ರೋಮ 2:15) ಎಂಬುದರ ಅರ್ಥವೇನು? (ಮತ್ತಾಯ 5:17–18ನ್ನು ನೋಡಿರಿ).

ಈ ದಿನದ ವಚನಗಳನ್ನು ನೋಡುವಾಗ, ಹತ್ತು ಕಟ್ಟಳೆಗಳು (ಅದರಲ್ಲಿ ಸಬ್ಬತ್ತು) ಹೊಸ ಒಡಂಬಡಿಕೆಯನುಸಾರ ಸಿಂಧುವಾಗಿ ಉಳಿದಿಲ್ಲ ಎಂದು ವಾದ ಮಾಡುವವರಿಗೆ ಉತ್ತರಕೊಡಲು ಹೇಗೆ ಉಪಯೋಗಿಸುತ್ತಾರೆ? ಈ ವಚನಗಳು ಈ ಅಂಶಗಳನ್ನು ದೃಢಪಡಿಸುತ್ತವೆಯೆ? ಇದಕ್ಕೆ ಪ್ರತಿಯಾಗಿ ಈ ವಚನಗಳಿಂದಲೇ ಧರ್ಮಪ್ರಮಾಣವು ನಿರಂತರಕ್ಕೂ ಮುಂದುವರೆಯುತ್ತವೆ ಎಂಬುದನ್ನು ಸಾಬೀತುಪಡಿಸಲು ಹೇಗೆ ಉಪಯೋಗಿಸುವಿರಿ?

**ಸೋಮವಾರ** **ಮೇ 31**

# ಹೃದಯದಲ್ಲಿ ನಡೆಯುವ ಕಾರ್ಯ

ದಕ್ಷಿಣ ರಾಜ್ಯವಾದ ಯೆಹೂದ್ಯರಾಜ್ಯವು ಅವನತಿ ಹೊಂದಿ ಜನರನ್ನು ಬ್ಯಾಬಿಲೋನಿಯನ್ನರು ಸೆರೆದೊಯ್ಯುವ ಸಂದರ್ಭದಲ್ಲಿ ದೇವರು ತನ್ನ ಪ್ರವಾದಿಯಾದ ಯೆರೆಮೀಯನ ಮುಖಾಂತರ 'ಹೊಸ ಒಡಂಬಡಿಕೆ'ಯನ್ನು ಪ್ರಕಟಿಸಿದನು. ಸತ್ಯವೇದದಲ್ಲಿ ಮೊದಲಸಲ ಈ ಆಲೋಚನೆಯು ವ್ಯಕ್ತವಾಗಿದೆ. ಹತ್ತು ಕುಲಗಳನ್ನು ಹೊಂದಿದ್ದ ಇಸ್ರಾಯೇಲ್ ರಾಜ್ಯವು ನಾಶವಾಗುವ ಸಂದರ್ಭದಲ್ಲಿ (ಯೆರೆಮೀಯನ ಕಾಲಕ್ಕಿಂತ 150 ವರ್ಷಕ್ಕಿಂತ ಮುಂಚೆ) ಮತ್ತೊಂದು ಒಡಂಬಡಿಕೆಯು ಆಲೋಚನೆ ಪುನಃ ಪ್ರವಾದಿಯಾದ ಹೋಶೇಯನಿಂದ ಉಲ್ಲೇಖಗೊಂಡಿತು (ಹೋಶೇಯ 2:18–20).

ಹೋಶೇಯ 2:18–20 ವಚನಗಳನ್ನು ಓದಿರಿ. ದೇವರು ಈ ವಚನಗಳಲ್ಲಿ ತನ್ನ ಜನರಿಗೆ ಹೇಳಿರುವುದನ್ನು, ಯೆರೇಮೀಯ 31:31–34 ವಚನಗಳಲ್ಲಿ ಹೇಳಿರುವುದಕ್ಕೆ ಇರುವ ಸಾಮ್ಯತೆಗಳನ್ನು ಗಮನಿಸಿರಿ. ಯಾವ ಒಂದು ಸಾಮಾನ್ಯ ಕಲ್ಪನೆಯು ಇಲ್ಲಿ ಉಪಯೋಗಿಸಲ್ಪಟ್ಟಿದೆ ಮತ್ತು ಒಡಂಬಡಿಕೆಯ ಮೂಲಾರ್ಥ ಮತ್ತು ಲಕ್ಷಣದ ಬಗ್ಗೆ ಇದು ಏನು ಹೇಳುತ್ತದೆ?

ಪೂರ್ವಕಾಲದಲ್ಲಿ (ಚರಿತ್ರೆಯಲ್ಲಿ) ದೇವರು ತನ್ನ ಒಡಂಬಡಿಕೆಯ ಜನರಿಗೋಸ್ಕರ ಮಾಡಿದ ಯೋಜನೆಗಳಿಗೆ ಅಡ್ಡಿಯಾದ ಸಂದರ್ಭಗಳಲ್ಲಿ ದೇವರು ತನ್ನ ಪ್ರವಾದಿಗಳನ್ನು ಕಳುಹಿಸಿ ತನ್ನ ಒಡಂಬಡಿಕೆಗೆ ವಿಧೇಯರಾದ ಜನರಿರುವುದರಿಂದ ಅದು ಇನ್ನೂ ಅಂತ್ಯಗೊಂಡಿಲ್ಲವೆಂದು ಘೋಷಿಸುತ್ತಾನೆ. ಜನರು ಎಷ್ಟೇ ಅಪ್ರಮಾಣಿಕರಾಗಿದ್ದರೂ, ಧರ್ಮಭ್ರಷ್ಟತೆ, ಬಂಡಾಯ, ಅವಿಧೇಯತೆ ಅವರಲ್ಲಿ ತುಂಬಿದ್ದರೂ ಯಾರು ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ವಿಧೇಯರಾಗಿ ದೇವರ ವಾಗ್ದಾನಗಳಿಗೆ ಸಿದ್ಧಮನಸ್ಸುಳ್ಳವರಾಗಿತ್ತಾರೋ ಅವರೊಂದಿಗೆ ತನ್ನ ಒಡಂಬಡಿಕೆಯ ಸಂಬಂಧವನ್ನು ಮುಂದುವರೆಸಿಕೊಂಡು ಹೋಗಲು ತಾನು ಸಹಾ ಇನ್ನೂ ಸಿದ್ಧವಾಗಿರುವುದನ್ನು ಘೋಷಿಸುತ್ತಾನೆ.

ಈ ಕೆಳಗಿನ ವಚನಗಳನ್ನು ಗಮನಿಸಿರಿ. ಈ ವಚನಗಳು ನಿರ್ದಿಷ್ಟವಾಗಿ

ಹೊಸ ಒಡಂಬಡಿಕೆಯನ್ನು ಕುರಿತು ಹೇಳುತ್ತಿಲ್ಲವಾದರೂ ಹೊಸ ಒಡಂಬಡಿಕೆಯ ನಿಯಮಗಳನ್ನು ಪ್ರತಿಬಿಂಬಿಸುವ ಯಾವ ಅಂಶಗಳು ಈ ವಚನಗಳನ್ನು ಹೊಂದಿವೆ?

ಯೆಹೆ 11:19 ________________________________

ಯೆಹೆ 18:31 ________________________________

ಹೆಯೆ 36:26 ________________________________

ಅವರು ನನ್ನನ್ನು ಯೆಹೋವನೆಂದು ಗ್ರಹಿಸತಕ್ಕ ಹೃದಯವನ್ನು ಅವರಿಗೆ ಅನುಗ್ರಹಿಸುವೆನು (ಯೆರೆ 24:7). ಕಲ್ಲಾದ ಹೃದಯವನ್ನು ಅವರೊಳಗಿಂದ ತೆಗೆದು ಮೃದುವಾದ ಹೃದಯವನ್ನು ಅವರಿಗೆ ಅನುಗ್ರಹಿಸುವೆನು (ಯೆರೆ 11:19) ಹೊಸ ಮನಸ್ಸನ್ನು ಕೊಟ್ಟು ನೂತನ (ಹೊಸ) ಸ್ವಭಾವವನ್ನು ಹುಟ್ಟಿಸುವೆನು (ಯೆಹೆ 36:26). ನನ್ನ ಆತ್ಮವನ್ನು ನಿಮ್ಮಲ್ಲಿ ನೆಲೆಸಿರುವಂತೆ ........ ಮಾಡುವೆನು (ಯೆಹೆ 36:27). ದೇವರು ಮಾಡುವ ಈ ಕೆಲಸವೇ ಹೊಸಒಡಂಬಡಿಕೆಗೆ ಅಸ್ತಿವಾರ (ಆಧಾರ)ವಾಗಿದೆ.

ಯಾರಾದರೂ ನಿಮ್ಮ ಬಳಿಗೆ ಬಂದು, ನನಗೆ ಹೊಸಹೃದಯಬೇಕು, ಧರ್ಮ ಪ್ರಮಾಣವು ನನ್ನ ಹೃದಯದ ಮೇಲೆ ಬರೆಯಲ್ಪಡಬೇಕು ನನಗೆ ದೇವರನ್ನು ತಿಳಿದುಕೊಳ್ಳುವ ಹೃದಯಬೇಕು. ಆದರೆ ಅದನ್ನು ಪಡೆದುಕೊಳ್ಳುವುದು ಹೇಗೆಂದು ಗೊತ್ತಿಲ್ಲವೆಂದು ಹೇಳಿದರೆ ಆ ವ್ಯಕ್ತಿಗೆ ನೀವೇನು ಹೇಳುವಿರಿ?

**ಮಂಗಳವಾರ** **ಜೂನ್ 1**

## ಹಳೆಯ ಮತ್ತು ಹೊಸಒಡಂಬಡಿಕೆ

ಅನ್ಯದೇಶೀಯರಲ್ಲಿ ಯಾರು ಯೆಹೋವನೆಂಬ ನನ್ನನ್ನು ಅವಲಂಬಿಸಿ ಸೇವಿಸಿ ನನ್ನ ನಾಮವನ್ನು ಪ್ರೀತಿಸಿ ನನಗೆ ದಾಸರಾಗಿ ಸಬ್ಬತ್ ದಿನವನ್ನು ಹೊಲೆ ಮಾಡದೆ ನನ್ನ ದಿನವೆಂದು ಆಚರಿಸಿ ನನ್ನ ಒಡಂಬಡಿಕೆಯನ್ನು ಭದ್ರವಾಗಿ ಹಿಡಿಯುತ್ತಾರೋ ಅವರೆಲ್ಲರನ್ನೂ ನಾನು ನನ್ನ ಪವಿತ್ರಪರ್ವತಕ್ಕೆ ಬರಮಾಡಿ ನನ್ನ ಪ್ರಾರ್ಥನಾಲಯದಲ್ಲಿ ಉಲ್ಲಾಸಗೊಳಿಸುವೆನು; ನನ್ನ ಯಜ್ಞವೇದಿಯಲ್ಲಿ ಅವರು ಅರ್ಪಿಸುವ ಸರ್ವಾಂಗ ಹೋಮಗಳೂ ಯಜ್ಞಗಳೂ ನನಗೆ ಮೆಚ್ಚಿಕೆ

ಯಾಗುವವು. ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯ ಎನಿಸಿಕೊಳ್ಳುವುದು (ಯೆಶಾಯ 56:6,7).

ಯೆರೆಮೀಯನು ನಾನು ಇಸ್ರಾಯೇಲ್ ವಂಶದವರೊಂದಿಗೆ ಹೊಸದಾಗಿ ಒಡಂಬಡಿಕೆ ಮಾಡಿಕೊಳ್ಳುತ್ತೇನೆಂದು ದೇವರು ಹೇಳಿದ ಮಾತನ್ನು ಯೆರೆಮೀಯ 31:33ನೇ ವಚನದಲ್ಲಿ ನೋಡುತ್ತೇವೆ.

ಅಬ್ರಹಾಮನ ಯೆಹೂದ್ಯರು ರಕ್ತಸಂಬಂಧದಲ್ಲಿ ಹುಟ್ಟಿದವರು ಮಾತ್ರ ಒಡಂಬಡಿಕೆ ವಾಗ್ದಾನಗಳನ್ನು ಪಡಕೊಳ್ಳುತ್ತಾರೆಂದು ಅರ್ಥವೆ?

ಇಲ್ಲಿ ಇದು ಹಳೆ ಒಡಂಬಡಿಕೆಯ ಕಾಲದಲ್ಲೂ ಸಹಾ ನಿಜವಾಗಿರಲಿಲ್ಲ. ಖಂಡಿತವಾಗಿಯೂ ಇಡೀ ಯೆಹೂದ್ಯ ಜನಾಂಗಕ್ಕೆ ಒಡಂಬಡಿಕೆಯ ವಾಗ್ದಾನಗಳು ಕೊಡಲ್ಪಟ್ಟಿದ್ದವು ಸರಿ. ಆದರೆ ಈ ಒಡಂಬಡಿಕೆಯೂ ಯಾರನ್ನೇ ಆಗಲಿ ಹೊರತುಪಡಿಸುವುದಿಲ್ಲ. ಇದಕ್ಕೆ ಪ್ರತಿಯಾಗಿ ಎಲ್ಲಾ ಯೆಹೂದ್ಯರೂ ಅನ್ಯಜನಾಂಗದವರೂ ವಾಗ್ದಾನಗಳಿಗೆ ಬಾಧ್ಯಸ್ಥರಾಗಲು ಆಹ್ವಾನಿಸಲ್ಪಟ್ಟಿದ್ದಾರೆ. ಆದರೆ ಅವರು ಒಡಂಬಡಿಕೆ ಪ್ರವೇಶಿಸಲು ಒಪ್ಪುವವರಾಗಿರಬೇಕು ಅಷ್ಟೆ. ಇದು ನಿಶ್ಚಯವಾಗಿಯೂ ಇಂದು ಭಿನ್ನವಾಗಿರುವುದಿಲ್ಲ.

ಮೇಲಿನ ವಚನಗಳನ್ನು ಯೆಶಾಯ ಪುಸ್ತಕದಲ್ಲಿ ಓದಿರಿ. ದೇವರನ್ನು ಅವಲಂಬಿಸಿ ಸೇವಿಸಬೇಕೆನ್ನುವವರಿಗೆ ಯಾವ ಷರತ್ತುಗಳನ್ನು ಹಾಕುತ್ತವೆ? ದೇವರು ಆವಾಗ ಅವರನ್ನು ಏನು ಕೇಳಿದ್ದನೋ ಮತ್ತು ನಮ್ಮನ್ನು ಏನು ಕೇಳುತ್ತಾನೋ ಅದರಲ್ಲಿ ಏನಾದರೂ ವ್ಯತ್ಯಾಸವಿದೆಯೇ? ನಿಮ್ಮ ಉತ್ತರವನ್ನು ವಿವರಿಸಿರಿ.

ಹೊಸಒಡಂಬಡಿಕೆಯನ್ನು ಉತ್ತಮವಾದದ್ದೆಂದು ಕರೆಯಲ್ಪಟ್ಟಿದ್ದರೂ (ಬುಧವಾರದ ಅಧಯನವನ್ನು ನೋಡಿರಿ). ಹಳೆ ಮತ್ತು ಹೊಸ ಒಡಂಬಡಿಕೆಯ ಮೂಲಾಂಶಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಈ ಎರಡೂ ಒಡಂಬಡಿಕೆಗಳಲ್ಲಿ ರಕ್ಷಣೆಯನ್ನು ಕೊಡುತ್ತಿರುವ ದೇವರು ಒಬ್ಬನೇ ಆಗಿದ್ದಾನೆ. ಮತ್ತು ಒಂದೇ ರೀತಿಯಲ್ಲಿ ಅಂದರೆ ಕೃಪೆಯಿಂದ ರಕ್ಷಿಸುವ ದೇವರಾಗಿದ್ದಾನೆ (ವಿ.ಕಾಂಡ 34:6, ರೋಮನ್ಸ್ 3:24). ಅದೇ ದೇವರು ನಂಬಿಕೆಯಿಂದ ತನ್ನ ಕ್ಷಮಾಪಣೆಯ

ವಾಗ್ದಾನವನ್ನು ತಮಗಾಗಿ ಸಾಧಿಸಿಕೊಳ್ಳುವವರನ್ನು ಹುಡುಕುವವನಾಗಿದ್ದಾನೆ (ಯೆರೆಮೀಯ 31:34 ಇಬ್ರಿಯ 8:12). ಅದೇ ದೇವರು ಹೃದಯದ ಮೇಲೆ ತನ್ನ ಆಜ್ಞೆಗಳ ನ್ನು ಬರೆಸಿಕೊಳ್ಳಲು ಬಯಸುವ ಮತ್ತು ನಂಬಿಕೆಯ ಸಂಬಂಧದಲ್ಲಿ ಆತನನ್ನು ಹಿಂಬಾಲಿಸುವವರನ್ನು ಹುಡುಕುವ ದೇವರಾಗಿದ್ದಾನೆ (ಯೆರೆ 31:33, ಇಬ್ರಿಯ 8:10). ಅವರು ಯೆಹೂದ್ಯರಾಗಿದ್ದರೂ ಸರಿ ಇಲ್ಲವೇ ಅನ್ಯ ಧರ್ಮೀಯರಾಗಿದ್ದರೂ ಸರಿ ಹೊಸ ಒಡಂಬಡಿಕೆಯಲ್ಲಿ ಕೃಪೆಯ ಆಯ್ಕೆಗೆ ಪ್ರತಿಕ್ರಿಯೆ ನೀಡಿದ ಯೆಹೂದ್ಯರು ಯೇಸುಕ್ರಿಸ್ತನನ್ನು ಆತನ ಸುವಾರ್ತೆಯನ್ನು ಅಂಗೀಕರಿಸಿಕೊಂಡರು. ಒಂದುಕಾಲಕ್ಕೆ ಅವರು ಸಭೆಯ ಹೃದಯಭಾಗವಾಗಿದ್ದರು, ಕೃಪೆಯಿಂದ ಆರಿಸಿಕೊಂಡ "ಉಳಿದವರಾಗಿದ್ದರು" (ರೋಮ 11:5). ಇವುಗಳಿಗೆ ವಿರೋಧವಾದವರು ತಮ್ಮ ಹೃದಯಗಳನ್ನು ಕಠಿಣ ಮಾಡಿಕೊಂಡರು (ರೋಮ 11:7). ಅದೇ ಸಮಯದಲ್ಲಿ ಮೊದಮೊದಲು ಸುವಾರ್ತೆಯನ್ನು ನಂಬದೆ ಹೋದ ಅನ್ಯರು ನಂತರ ಅದನ್ನು ನಂಬಿ ಅಂಗೀಕಾರ ಮಾಡಿಕೊಂಡರು ಮತ್ತು ದೇವಜನರೆಂಬ ಎಣ್ಣೇಮರಕ್ಕೆ ಕಸಿಕಟ್ಟಿಸಿಕೊಂಡರು. ಅವರು ಯಾವುದೇ ಜನಾಂಗಕ್ಕೆ ಸೇರಿದವರಾಗಿದ್ದರೂ ಅಡ್ಡಿಯಿರಲಿಲ್ಲ (ರೋಮ 11:13–24). ಆದುದರಿಂದ, ಅನ್ಯರು ಆ ಕಾಲದಲ್ಲಿ ಕ್ರಿಸ್ತನಿಂದ ಬೇರ್ಪಟ್ಟು ಇಸ್ರಾಯೇಲ್ಯರ ಹಕ್ಕಿನಲ್ಲಿ ಪಾಲಿಲ್ಲದವರೂ ಒಡಂಬಡಿಕೆಯ ವಾಗ್ದಾನಕ್ಕೆ ಹೆರವರೂ ಆಗಿದ್ದವರು (ಎಫೆಸ 2:12). ಯೇಸುಕ್ರಿಸ್ತನ ರಕ್ತದ ಮೂಲಕ ಹತ್ತಿರವಾಗಿದ್ದಾರೆ. ಯೇಸುಕ್ರಿಸ್ತನು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ (ಇಬ್ರಿಯ 9:15). ಆತನನ್ನು ನಂಬುವವರು ಯಾವ ದೇಶದವರಾದರೂ ಜನಾಂಗದವರಾಗಿದ್ದರೂ ಸರಿ.

**ಬುಧವಾರ** **ಜೂನ್ 2**

## ಒಂದು ಉತ್ತಮವಾದ ಒಡಂಬಡಿಕೆ (ಇಬ್ರಿಯ 8:6)

ನಿನ್ನೆಯ ಪಾಠದಲ್ಲಿ ಹಳೆಯ ಮತ್ತು ಹೊಸ ಒಡಂಬಡಿಕೆಯ ಮೂಲಾಂಶಗಳ ವಿಷಯದಲ್ಲಿ ಎರಡೂ ಒಂದೇ ಆಗಿದೆ. ನಮ್ಮಲ್ಲಿ ಯಾವುದೇ ಅರ್ಹತೆಗಳಿಲ್ಲ-ದಿದ್ದರೂ ನಮ್ಮ ಪಾಪಗಳನ್ನು ಕ್ಷಮಿಸುವ ದೇವರ ಮೇಲೆ ನಂಬಿಕೆ ಇಡುವುದರಿಂದ ಮಾತ್ರ ಆತನ ಕೃಪೆಯಿಂದ ರಕ್ಷಣೆಯಾಗುತ್ತದೆ. ಕ್ಷಮಾಪಣೆ ಹೊಂದಿಕೊಂಡುದರ ಫಲಿತಾಂಶವಾಗಿ ನಾವು ಆತನಲ್ಲಿ ನಂಬಿಕೆಯಿಟ್ಟು ಶರಣಾಗಿ ವಿಧೇಯರಾಗುವುದ–

ರಿಂದ ಆತನ ಸಂಬಂಧಕ್ಕೆ ಪ್ರವೇಶಿಸುತ್ತೇವೆ. ಆದಾಗ್ಯೂ, ಇಬ್ರಿಯ ಪುಸ್ತಕವು ಹೊಸ ಒಡಂಬಡಿಕೆಯನ್ನು ಉತ್ತಮವಾದ ಒಡಂಬಡಿಕೆ ಎಂದು ಕರೆಯುತ್ತದೆ. ಅದರ ಅರ್ಥವೇನೆಂದು ಹೇಗೆ ಅರ್ಥಮಾಡಿಕೊಳ್ಳುತ್ತೇವೆ? ಒಂದು ಒಡಂಬಡಿಕೆ ಇನ್ನೊಂದು ಒಡಂಬಡಿಕೆಗಿಂತ ಹೇಗೆ ಉತ್ತಮವಾಗಿದೆ?

ಹಳೆಯ ಒಡಂಬಡಿಕೆಯನ್ನು ವಿಫಲತೆಗೊಳಿಸುವ ದೋಷ (ತಪ್ಪು) ಹುದುಗಿರುವುದೆಲ್ಲಿ? (ಇಬ್ರಿಯ 8:7,8).

ಹಳೆಯ ಒಡಂಬಡಿಕೆಯ ಸಮಸ್ಯೆಯು ಒಡಂಬಡಿಕೆಯದಲ್ಲ. ಆದರೆ ಅದನ್ನು ಜನರು ನಂಬಿಕೆಯಿಂದ ಹಿಡಿದುಕೊಳ್ಳಲು ವಿಫಲರಾದುದೇ ಸಮಸ್ಯೆ (ಇಬ್ರಿಯ 4;2). ಹಳೆ ಒಡಂಬಡಿಕೆಗಿಂತ ಹೊಸ ಒಡಂಬಡಿಕೆಯು ಶ್ರೇಷ್ಠವಾಗಿರುವುದು ಯೇಸುಕ್ರಿಸ್ತನ ರಕ್ತದಿಂದ. ಹಳೆಯ ಒಡಂಬಡಿಕೆಯನುಸಾರ ಪ್ರಾಣಿಗಳನ್ನು ವಧಿಸಿ ಯಜ್ಞಮಾಡಲಾಗುತ್ತಿತ್ತು. ಆದರೆ ಈವಾಗ ಯೇಸುಕ್ರಿಸ್ತನು ನಿಜವಾಗಿಯೂ ಬಲಿಯಾಗುವುದಕ್ಕೆ ಮತ್ತು ಮಹಾಯಾಜಕನಾಗಿ ಸೇವೆ ಮಾಡಲು ಕಾಣಿಸಿಕೊಂಡನು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಳೆಯ ಒಡಂಬಡಿಕೆಯಲ್ಲಿ ಮತ್ತು ಹೊಸ ಒಡಂಬಡಿಕೆಯಲ್ಲಿ ಕೊಡಲಾಗಿರುವ ರಕ್ಷಣೆ ಒಂದೇ ಆಗಿದೆ. ಆದರೆ ಹೊಸ ಒಡಂಬಡಿಕೆಯಲ್ಲಿ ಮನುಷ್ಯರ ಮೇಲೆ ದೇವರು ತೋರುವ ಪ್ರೀತಿಯು ಕ್ರಿಸ್ತನ ಬಲಿಯಿಂದ ಸಂಪೂರ್ಣವಾಗಿ ವ್ಯಕ್ತವಾಗಿದೆ. ಹಳೆಯ ಒಡಂಬಡಿಕೆಯ ಕಾಲದಲ್ಲಿ ಅರ್ಪಿಸುತ್ತಿದ್ದ ಯಜ್ಞಗಳು ನಿಜವಾದುದರ ಸಂಕೇತಗಳಾಗಿದ್ದವು ಮತ್ತು ಪ್ರತಿರೂಪಗಳಾಗಿದ್ದವು. ಯೇಸುಕ್ರಿಸ್ತನು ಅವುಗಳ ನಿಜಸ್ವರೂಪವಾಗಿದ್ದನು. ಆತನ ಪಾಪರಹಿತ ಜೀವನ, ಮರಣ ಮತ್ತು ಮಹಾಯಾಜಕನ ಸೇವೆ ಇವೆಲ್ಲವನ್ನೂ ದೇವದರ್ಶನ ಗುಡಾರದ ಸೇವೆಗಳು ಸಂಕೇತಿಸುತ್ತಿದ್ದವು (ಇಬ್ರಿ 9:8–14).

ಈವಾಗ ನಮಗೆ ಸಂಕೇತಗಳು, ಮಾದರಿಗಳು ಉದಾಹರಣೆಗಳಿಗೆ ಬದಲಾಗಿ ಯಜ್ಞದ ಕುರಿಯಾದಾತನಾದ ಯೇಸುಕ್ರಿಸ್ತನು ಕೊಯ್ಯಲ್ಪಟ್ಟ ಕುರಿಯಾಗಿ ಮಾತ್ರವಲ್ಲ ಪರಲೋಕದಲ್ಲಿ ಮಹಾಪರಿಶುದ್ಧ ಸ್ಥಳದಲ್ಲಿ ನಮಗಾಗಿ ಮಹಾಯಾಜಕನ ಉದ್ಯೋಗವನ್ನು ನಡೆಸುತ್ತಿದ್ದಾನೆ (ಇಬ್ರಿಯ 7:25). ಆತನು ನಮಗೆ ನೀಡುವ

ರಕ್ಷಣೆಯಲ್ಲಿ ಯಾವ ವ್ಯತ್ಯಾಸವಿಲ್ಲದಿದ್ದರೂ ತನ್ನನ್ನು ತಾನೇ ಸಂಪೂರ್ಣವಾಗಿ ರಕ್ಷಣೆ ಒದಗಿಸುವ ರಕ್ಷಕನಾಗಿ ಪ್ರಕಟಿಸಿಕೊಂಡಿದ್ದಾನೆ. ಈ ಕಾರಣದಿಂದ ಹೊಸ ಒಡಂಬಡಿಕೆಯು ಹಳೆಯ ಒಡಂಬಡಿಕೆಗಿಂತ ಉತ್ತಮವಾದುದಾಗಿದೆ. ಇಬ್ರಿಯ 8:5 ಮತ್ತು ಇಬ್ರಿಯ 10:1 ವಚನಗಳನ್ನು ಓದಿರಿ.

ಹಳೆಒಡಂಬಡಿಕೆಯ ದೇವದರ್ಶನ ಗುಡಾರದ ಸೇವೆಗಳನ್ನು ವಿವರಿಸುವಾಗ ಲೇಖಕನು ಯಾವ ಪದವನ್ನು ಉಪಯೋಗಿಸಿದ್ದಾನೆ. ಈ ಪದದ ಸಹಾಯದಿಂದ ಹೊಸ ಒಡಂಬಡಿಕೆಯ ಶ್ರೇಷ್ಠತೆಯನ್ನು ಹೇಗೆ ಅರ್ಥಮಾಡಿಕೊಳ್ಳಬಹುದು?

ಈ ಭೂಮಿಯ ದೇವದರ್ಶನ ಗುಡಾರದ ಸೇವೆಗಳು ಯಜ್ಞಗಳು, ಹೋಮಗಳು ಮತ್ತು ಇತರೆ ಧಾರ್ಮಿಕ ಆಚರಣೆಗಳು ದೇವರ ಬಗ್ಗೆ ಉಂಟುಮಾಡುವ ಅರಿವಿಗಿಂತ ಯೇಸುಕ್ರಿಸ್ತನ ಜೀವನ ಮರಣ ಮತ್ತು ಆತನು ನಮ್ಮ ಸಲುವಾಗಿ ನಡೆಸುವ ಯಾಜಕೋದ್ಯೋಗವು ಉತ್ತಮವಾದ ಅರಿವನ್ನು ಕೊಡುತ್ತದೆ. ಏಕೆ? ಇದರ ಬಗ್ಗೆ ಆಲೋಚಿಸಿರಿ?

**ಗುರುವಾರ** **ಜೂನ್ 3**

## ಹೊಸಒಡಂಬಡಿಕೆಯ ಯಾಜಕ

ಇಬ್ರಿಯ ಪುಸ್ತಕವು ಯೇಸುಕ್ರಿಸ್ತನು ಪರಲೋಕದ ಗುಡಾರದಲ್ಲಿ ನಡೆಸುವ ಯಾಜಕೋದ್ಯೋಗದ ಮೇಲೆ ಹೆಚ್ಚು ಒತ್ತುಕೊಡುತ್ತದೆ. ಸತ್ಯವೇದದ ಹೊಸ ಒಡಂಬಡಿಕೆಯ ಪುಸ್ತಕಗಳಲ್ಲಿ ಇಬ್ರಿಯ ಪುಸ್ತಕವು ದೇವರು ಮನುಷ್ಯರ ಜೊತೆ ಮಾಡಿಕೊಂಡ ಹೊಸದಾದ ಒಡಂಬಡಿಕೆಯ ಬಗ್ಗೆ ಸ್ಪಷ್ಟವಾದ ವಿವರವನ್ನು ಯೇಸುಕ್ರಿಸ್ತನು ಮಹಾಯಾಜಕನಾಗಿ ನಡೆಸುವ ಉದ್ಯೋಗಕ್ಕೆ ಒತ್ತುಕೊಟ್ಟು ಹೇಳುತ್ತದೆ. ಇದು ಕೇವಲ ಆಕಸ್ಮಿಕ ಘಟನೆಯಲ್ಲ (ಕಾಕತಾಳೀಯವಲ್ಲ). ಯೇಸುಕ್ರಿಸ್ತನ ಪರಲೋಕದ ಗುಡಾರ ಸೇವೆಯು ಹೊಸಒಡಂಬಡಿಕೆಯ ವಾಗ್ದಾನಗಳ ಜೊತೆಗೆ ಸಂಕೀರ್ಣವಾಗಿ ಕಟ್ಟಲ್ಪಟ್ಟಿದೆ.

ಹಳೆಯ ಒಡಂಬಡಿಕೆಯ ದೇವದರ್ಶನ ಗುಡಾರದ ಸೇವೆಗಳ ಮೂಲಕ ಹಳೆಯ ಒಡಂಬಡಿಕೆಯ ಸತ್ಯಗಳನ್ನು ಬೋಧಿಸಲಾಗುತ್ತಿತ್ತು. ಯಜ್ಞಗಳು ಮತ್ತು ಮಧ್ಯಸ್ಥಿಕೆಯ ಮೇಲೆ ಇದು ಕೇಂದ್ರೀಕೃತಗೊಂಡಿತ್ತು. ಪ್ರಾಣಿಗಳ ಬಲಿ

ಅರ್ಪಣೆಯಾಗುತ್ತಿತ್ತು. ಅವುಗಳ ರಕ್ತವು ಯಾಜಕರಿಂದ ಮಧ್ಯಸ್ಥಿಕೆ ವಹಿಸುತ್ತಿತ್ತು. ಇವೆಲ್ಲವೂ ಅವಶ್ಯವಾಗಿ ಯೇಸುಕ್ರಿಸ್ತನಲ್ಲಿ ಸಿಗುವ ರಕ್ಷಣೆಯ ಸಂಕೇತಗಳಾಗಿದ್ದವು. ಅವುಗಳಲ್ಲಿ ಸ್ವತಃ ಯಾವ ರಕ್ಷಣೆಯು ಇರಲಿಲ್ಲ.

ಇಬ್ರಿಯ 10:4ನೇ ವಚನವನ್ನು ಓದಿರಿ. ಈ ಪ್ರಾಣಿಗಳ ಬಲಿಯಿಂದ ಯಾವ ರಕ್ಷಣೆಯು ಉಂಟಾಗುತ್ತಿರಲಿಲ್ಲವೇಕೆ? ಪ್ರಾಣಿಗಳ ಬಲಿಯು (ಮರಣವು) ರಕ್ಷಣೆ ತರುವುದಕ್ಕೆ ಸಾಕಾಗುತ್ತಿರಲಿಲ್ಲವೇಕೆ?

ದೇವದರ್ಶನ ಗುಡಾರದಲ್ಲಿ ನಡೆಯುತ್ತಿದ್ದ ಎಲ್ಲಾ ಯಜ್ಞಗಳು ಮತ್ತು ಅವುಗಳೊಂದಿಗೆ ನಡೆಯುತ್ತಿದ್ದ ಯಾಜಕರ ಮಧ್ಯಸ್ಥಿಕೆ ಕೆಲಸ ಇವೆಲ್ಲದರ ಉದ್ದೇಶಗಳು ಯೇಸುಕ್ರಿಸ್ತನಲ್ಲಿ ನೆರವೇರಿದವು. ಹೊಸ ಒಡಂಬಡಿಕೆಗೆ ಆಧಾರವಾದ ರಕ್ತವನ್ನು ಕೊಡಲು ಯೇಸುಕ್ರಿಸ್ತನು ತಾನೇ ತನ್ನನ್ನು ಯಜ್ಞದ ಕುರಿಯಾಗಿ ಅರ್ಪಿಸಿಕೊಂಡನು. ಯೇಸುಕ್ರಿಸ್ತನ ರಕ್ತವು ಹೊಸಒಡಂಬಡಿಕೆಯನ್ನು ದೃಢೀಕರಿಸಲಾಗಿ ಸಿನಾಯಿ ಬೆಟ್ಟದಲ್ಲಿ ನಡೆದ ಒಡಂಬಡಿಕೆ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಆಚರಣೆಗಳು, ಬಲಿಗಳು ಅನೂರ್ಜಿತಗೊಂಡು ಇಲ್ಲದಂತಾದವು. ನಿಜವಾದ ಯಜ್ಞವು ಒಂದೇ ಸಲಕ್ಕೆ ಸಮರ್ಪಿತವಾಯ್ತು (ಇಬ್ರಿಯ 9:26). ಒಂದು ಸಾರಿ ಯೇಸುಕ್ರಿಸ್ತನು ಸತ್ತಮೇಲೆ ಮತ್ತೆ ಯಾವ ಪ್ರಾಣಿಯನ್ನು ವಧಿಸಬೇಕಾದ ಅಗತ್ಯವಿಲ್ಲ; ಭೂಮಿಯ ಗುಡಾರ ಸೇವೆಗಳು ತಮ್ಮ ಕಾರ್ಯಗಳನ್ನು ಈಡೇರಿಸಿದವು.

ಮತ್ತಾಯ 27:51ನ್ನು ಓದಿರಿ. ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮರಣ ಹೊಂದಿದಾಗ ಹೇಗೆ ಆಲಯದ ತೆರೆ ಮೇಲಿನಿಂದ ಕೆಳಗಿನವರೆಗೂ ಹರಿದು ಎರಡುಭಾಗವಾಯಿತು. ಈ ಘಟನೆಯು ಭೂಮಿಯ ದೇವದರ್ಶನ ಗುಡಾರದಲ್ಲಿ ನಡೆಯುತ್ತಿದ್ದ ಎಲ್ಲಾ ಸೇವೆಗಳು ಮುಗಿದುಹೋದವು ಎಂಬುದನ್ನು ಅರಿತುಕೊಳ್ಳಲು ಹೇಗೆ ಸಹಾಯ ಮಾಡುತ್ತವೆ?

ಯಾಜಕರ ಉದ್ಯೋಗವು ಅವಶ್ಯವಾಗಿ ಪ್ರಾಣಿಗಳ ಬಲಿಗೆ ಸಂಬಂಧಪಡುತ್ತಿತ್ತು. ಆ ಯಾಜಕರು ಜನರ ಸಲುವಾಗಿ ಭೂಮಿಯ ದೇವದರ್ಶನ ಗುಡಾರದಲ್ಲಿ ಯಜ್ಞಗಳನ್ನರ್ಪಿಸಿ ದೇವರಿಗೂ ಮನುಷ್ಯರಿಗೂ ಮಧ್ಯಸ್ಥರಾಗಿ ಕಾರ್ಯ

ನಿರ್ವಹಿಸುತ್ತಿದ್ದರು. ಒಮ್ಮೆ ಯಜ್ಞಾರ್ಪಣೆ ನಿಂತು ಹೋದಮೇಲೆ ಅವುಗಳನ್ನರ್ಪಿಸುವ ಯಾಜಕಸೇವೆಯೂ ಸಹಾ ನಿಂತುಹೋಯಿತು. ಸಮಸ್ತವೂ (ಎಲ್ಲಾ ಸೇವೆಗಳೂ) ಕ್ರಿಸ್ತನಿಂದಲೇ ನೆರವೇರಿದವು. ಈವಾಗ ಆತನು ತನ್ನ ಸ್ವರಕ್ತ ತೆಗೆದುಕೊಂಡು ಮಹಾಪರಿಶುದ್ಧ ಸ್ಥಳದಲ್ಲಿ ಮಧ್ಯಸ್ಥಿಕೆ ವಹಿಸುತ್ತಿದ್ದಾನೆ (ಇಬ್ರಿಯ 8:1–5). ಇಬ್ರಿಯ ಪುಸ್ತಕವು ಯೇಸುಕ್ರಿಸ್ತನನ್ನು ನಮ್ಮಸಲುವಾಗಿ ಪರಲೋಕ ಗುಡಾರದಲ್ಲಿ ತನ್ನ ರಕ್ತದಿಂದ ಸೇವೆಗೈಯ್ಯುತ್ತಿರುವ ಯಾಜಕನೆಂದು ಒತ್ತಿ ಹೇಳುತ್ತದೆ (ಇಬ್ರಿಯ 9:12). ಇದು ತಾನೆ ಹೊಸಒಡಂಬಡಿಕೆಯಲ್ಲಿ ನಮಗಿರುವ ನಿರೀಕ್ಷೆ ಮತ್ತು ವಾಗ್ದಾನಗಳಿಗೆ ಅಸ್ತಿವಾರವಾಗಿದೆ.

ಈಗಲೂ ಸಹಾ ಯೇಸುಕ್ರಿಸ್ತನು ತನ್ನ ರಕ್ತವನ್ನು ತಕ್ಕೊಂಡು ನಮ್ಮ ಪರವಾಗಿ ಸೇವೆಗೈಯ್ಯುತ್ತಿದ್ದಾನೆಂಬ ತಿಳುವಳಿಕೆಯು ನಮ್ಮಲ್ಲಿ ಯಾವ ಭಾವನೆಯನ್ನು ಹುಟ್ಟಿಸುತ್ತದೆ? ರಕ್ಷಣೆಯ ವಿಷಯವಾಗಿ ಇದು ನಮಗೆ ಎಷ್ಟು ವಿಶ್ವಾಸವನ್ನು ಆಶ್ವಾಸನೆಯನ್ನೂ ಕೊಡುವಂಥದ್ದಾಗಿದೆ?

**ಶುಕ್ರವಾರ** **ಜೂನ್ 4**

**ಹೆಚ್ಚಿನ ಚಿಂತನೆ :** ಯೇಸುಕ್ರಿಸ್ತನು ತನ್ನ ಶಿಷ್ಯರೊಡನೆ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಸೇವಿಸಿ ತನ್ನನ್ನು ಅವರ ವಿಮೋಚಕನನ್ನಾಗಿ ಸಮರ್ಪಿಸಿ–ಕೊಂಡನು. ಯಾರ್‍ಯಾರು ಕ್ರಿಸ್ತನನ್ನು ಸ್ವೀಕರಿಸುತ್ತಾರೋ ಅವರನ್ನುತನ್ನೊಡನೆ ಸಹಬಾಧ್ಯಸ್ತರನ್ನಾಗಿ ಮಾಡುವಂಥ ಹೊಸ ಒಡಂಬಡಿಕೆಯನ್ನು ಅವರ ಕೈಗೆ ಒಪ್ಪಿಸಿಕೊಟ್ಟನು. ಈ ಒಡಂಬಡಿಕೆಯಿಂದ ಈ ಲೋಕಕ್ಕೆ ಮತ್ತು ಪರಲೋಕಕ್ಕೆ ಅಗತ್ಯವಾದ ಆಶೀರ್ವಾದಗಳನ್ನು ಅವರಿಗೆ ಅನುಗ್ರಹಿಸಿದನು. ಈ ಒಡಂಬಡಿಕೆಯ ಕರಾರು ಯೇಸುಕ್ರಿಸ್ತನ ರಕ್ತದಿಂದ ಸ್ಥಿರಪಡಬೇಕಾಗಿತ್ತು. ಇಡೀ ಮಾನವ ಕುಲಕ್ಕಾಗಿ ಮಾಡಿದ ಅನಂತ ತ್ಯಾಗದ ಭಾಗವಾಗಿ ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಅನುಸರಿಸಲೆಂದು ಸಂಸ್ಕಾರಗಳನ್ನು ನೀಡಿದನು" – ಎಲೆನ್ ಜಿ ವೈಟಮ್ಮನವರ ಯುಗಯುಗಗಳ ಬಯಕೆ ಪುಸ್ತಕದಲ್ಲಿ 659ನೇ ಪುಟ. ಈ ಸಮಾಧಾನದ ಒಡಂಬಡಿಕೆಯ ಬಹಳ ಮುಖ್ಯವಾದ ಗುಣಲಕ್ಷಣ ಯಾವುದೆಂದರೆ ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಅವುಗಳಿಂದ ತಿರುಗಿಕೊಂಡ ಪಾಪಿಗೆ ತೋರುವ

ಅಪಾರವಾದ ಕ್ಷಮಿಸುವ ಕರುಣೆಯೇ ಆಗಿದೆ. ಪವಿತ್ರಾತ್ಮನು ಸುವಾರ್ತೆಯನ್ನು ದೇವರ ಕರುಣೆಯ ಮೂಲಕವಾಗಿ ದೊರಕುವ ರಕ್ಷಣೆ ಎಂಬುದಾಗಿ ವಿವರಿಸುತ್ತಾನೆ. ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು. ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ ಎಂದು ಕರ್ತನು ನುಡಿಯುತ್ತಾನೆ (ಇಬ್ರಿಯ 8:12). ದೇವರು ಪಾಪಿಗೆ ಕರುಣೆಯನ್ನು ತೋರಿಸುವ ಸಲುವಾಗಿ ನ್ಯಾಯವನ್ನು ತ್ಯಜಿಸುತ್ತಾನೆಯೆ? ಎಂದಿಗೂ ಇಲ್ಲ; ದೇವರು ತನ್ನ ಧರ್ಮಪ್ರಮಾಣಕ್ಕೆ ಭಯಪಡದೆ ಅದನ್ನು ಮೀರಿ ಅವಮಾನಿಸುವಂತೆ ಮನುಷ್ಯರನ್ನು ಬಿಟ್ಟುಬಿಡುವುದಿಲ್ಲ. ಹೊಸ ಒಡಂಬಡಿಕೆಯಲ್ಲಿ ಪರಿಪೂರ್ಣವಾದ ವಿಧೇಯತೆಯು ಜೀವನದ ನಿಬಂಧನೆಯಾಗಿದೆ. ಒಬ್ಬ ಪಾಪಿಯು ತನ್ನ ಪಾಪಳಿಗೆ ಪಶ್ಚಾತ್ತಾಪ ಪಟ್ಟು ಅವುಗಳನ್ನು ಅರಿಕೆ ಮಾಡಿದರೆ ಆತನಿಗೆ ಕ್ಷಮಾಪಣೆ ಸಿಗುತ್ತದೆ. ಯೇಸುಕ್ರಿಸ್ತನು ಅವನ ಪರವಾಗಿ ಮಾಡಿದ ತ್ಯಾಗದಿಂದ (ಯಜ್ಞವು) ಅವನಿಗೆ ಕ್ಷಮಾಪಣೆಯ ಕೊಡಲ್ಪಡುತ್ತದೆ. ನಂಬಿಕೆಯಿಂದ ಪಶ್ಚಾತ್ತಾಪಪಡುವ ಪ್ರತಿಯೊಬ್ಬ ಪಾಪಿಗೂ ಧರ್ಮಪ್ರಮಾಣವು ವಿಧಿಸುವ ಅಗತ್ಯತೆಯನ್ನು ಯೇಸುಕ್ರಿಸ್ತನೇ ಪೂರೈಸುವವನಾಗಿದ್ದಾನೆ– ಎಲೆನ್ ಜಿ ವೈಟಮ್ಮನವರ "ದೇವರ ಆಶ್ಚರ್ಯಕರವಾದ ಕೃಪೆ" ಪುಸ್ತಕದಲ್ಲಿ 138ನೇ ಪುಟ.

## ಆರೋಗ್ಯದ ಲೇಖನಮಾಲೆ
## ಹತ್ತನೇ ವಾರ

### * ವಸುಡಿನ ತೊಂದರೆ

**ವಸಡಿನ ರೋಗವೆಂದರೇನು?**

ವಸಡಿನಿಂದ ಕೀವು ಸುರಿತ ಅಥವಾ ಅದರ ಸೋಂಕು ಇದರಿಂದ ವಸಡು ದುರ್ಬಲವಾಗಿ ಹಲ್ಲುಗಳು ಬಿದ್ದುಹೋಗುತ್ತವೆ.

**ಗುರುತಿಸುವುದು ಹೇಗೆ?**

1. ಕೆಂಪಾದ ಹಾಗೂ ಊತಗೊಂಡ ವಸಡು.

2. ವಸಡು ನೋಯುತ್ತಿದ್ದು, ಹಲ್ಲುಜ್ಜಿದ ನಂತರ ರಕ್ತಸ್ರಾವವಾಗುತ್ತದೆ.

**ಕಾರಣವೇನು?**

ಹಲ್ಲುಗಳು ಹಾಗೂ ವಸಡುಗಳನ್ನು ಸ್ವಚ್ಛಗೊಳಿಸದಿದ್ದಾಗ, ನಾವು ಕುಡಿಯುವ ದ್ರವ ಪದಾರ್ಥ ಮತ್ತು ತಿನ್ನುವ ಆಹಾರದ ವ್ಯರ್ಥಪದಾರ್ಥಗಳು ಸೋಂಕಿ–ಗೊಳಗಾಗುತ್ತವೆ. ಆಗ ವಸಡಿನಲ್ಲಿ ಉರಿಯೂತವುಂಟಾಗುತ್ತದೆ.

**ಏನು ಮಾಡಬೇಕು?**

1. ದಿನಕ್ಕೆ ಎರಡು ಬಾರಿ ಹಲ್ಲುಗಳನ್ನು ಸ್ವಚ್ಛಗೊಳಿಸಬೇಕು.
2. ಚಿಕ್ಕದಾದ ತೆಳ್ಳನೆಯ ದಾರದಿಂದ ಹಲ್ಲುಗಳ ನಡುವೆ ಸ್ವಚ್ಛಗೊಳಿಸಬೇಕು.
3. ಜೀವಸತ್ವಗಳು ಹೇರಳವಾಗಿರುವ ಹಸಿರು ತರಕಾರಿಗಳು, ಬೀನ್ಸ್ ಮತ್ತು ಕಿತ್ತಳೆ, ಮೂಸಂಬಿ, ಸೀಬೆ, ಪರಂಗಿ ಹಣ್ಣು ಹಾಗೂ ಟೊಮಾಟೊ ಹೆಚ್ಚಾಗಿ ಉಪಯೋಗಿಸಬೇಕು.

## * ಏಡ್ಸ್

**ಏಡ್ಸ್ ಎಂದರೇನು?**

ಇದೊಂದು ಮಾರಣಾಂತಿಕ ವೈರಸ್ ಎಂಬ ವಿಷಾಣುವಾಗಿದ್ದು, ಮಾನವನ ರೋಗ ನಿರೋಧಕ ವ್ಯವಸ್ಥೆಯನ್ನು ನಾಶಮಾಡುತ್ತದೆ. ಅಂದರೆ ಶರೀರವು ಯಾವುದೇ ಸಾಧಾರಣ ರೋಗಗಳ ವಿರುದ್ಧ ಹೋರಾಡಲಾರದು. ಆದುದರಿಂದ ಯಾವುದೇ ಸೋಂಕು ಸಹ ಅಪಾಯಕಾರಿಯಾಗಬಹುದು.

**ಏಡ್ಸ್ ರೋಗಿಯನ್ನು ಗುರುತಿಸುವುದು ಹೇಗೆ?**

1. ರಕ್ತಮಿಶ್ರಿತ ಕೆಮ್ಮು, ತೂಕದಲ್ಲಿ ಇಳಿತ.
2. ನ್ಯೂಮೋನಿಯಾ ಜ್ವರ, ಚರ್ಮವು ಮೇಣದಂತೆ ವಿಕಾರಗೊಳ್ಳುತ್ತದೆ.

**ಕಾರಣವೇನು?**

ಅಸುರಕ್ಷಿತವಾದ ಲೈಂಗಿಕ ಸಂಬಂಧ

**ಏನು ಮಾಡಬೇಕು?**

ಏಡ್ಸ್ ಒಂದು ಸಾರಿ ಬಂದಲ್ಲಿ, ಅದು ಗುಣವಾಗುವುದಿಲ್ಲ. ಆದರೆ ವೆಚ್ಚದಾಯಕವಾದ ಸರಿಯಾದ ಚಿಕಿತ್ಸೆ ತೆಗೆದುಕೊಂಡಲ್ಲಿ ಏಡ್ಸ್ ರೋಗಿಯು

ಸೋಂಕು ತಗುಲಿದ ನಂತರವೂ 10–25 ವರ್ಷಗಳ ಕಾಲ ಜೀವಿಸಬಹುದಾಗಿದೆ. ಮದುವೆಯಾದ ಸಂಗಾತಿಯನ್ನು ಬಿಟ್ಟು ಬೇರೆಯವರೊಂದಿಗೆ ಲೈಂಗಿಕ ಸಂಬಂಧ ಬೇಡ.

ಏಡ್ಸ್ ರೋಗಿಯು ಗರ್ಭಿಣಿಯಾದಲ್ಲಿ, ಹುಟ್ಟಲಿರುವ ಮಗುವೂ ಸಹ ಆ ಸೋಂಕಿಗೆ ಒಳಗಾಗುವ ಸಾಧ್ಯತೆಯಿದೆ. ಆದರೆ ಈಗ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿರುವ ನೆವೆಪಿರೆನ್ ಮಾತ್ರೆಗಳನ್ನು ಗರ್ಭಿಣಿಯು ತೆಗೆದುಕೊಂಡಲ್ಲಿ ಹುಟ್ಟಲಿರುವ ಮಗುವನ್ನು ಏಡ್ಸ್ ಸೋಂಕಿನಿಂದ ರಕ್ಷಿಸಬಹುದು.

ವೈದ್ಯಕೀಯ ವಿಜ್ಞಾನವು ದಿನೇದಿನೇ ಬೆಳೆಯುತ್ತಿದೆ. ಆದುದರಿಂದ ಏಡ್ಸ್ ರೋಗದ ಚಿಕಿತ್ಸೆಯೂ ಸಹ ಆಗಿಂದಾಗ್ಗೆ ಬದಲಾಗುತ್ತಿರುತ್ತದೆ. ತಕ್ಷಣವೇ ತಜ್ಞವೈದ್ಯರನ್ನು ಭೇಟಿ ಮಾಡಿ.